## ಜಾಣರ ಪೆಟ್ಟಿಗೆ

### ಸುಮಧುರ ಸಿನಿಮಾಗಳು

ಡಿಂಕಾ ಮೂವೀಸ್‌ನಲ್ಲಿ 60–70ರ ದಶಕದ ಸಿನಿಮಾಗಳನ್ನು ಆಗಾಗ ಪ್ರಸಾರ ಮಾಡುತ್ತಿದ್ದಾರೆ. ಅವುಗಳನ್ನು ನೋಡುವುದು ಖುಷಿ ಕೊಡುತ್ತಿದೆ. ರಾಜಕುಮಾರ್, ಅಶ್ವಥ್, ಬಾಲಕೃಷ್ಣ, ಕಲ್ಪನಾ, ಆರತಿ, ಭಾರತಿ ಅವರಂತಹ ಖ್ಯಾತ ನಟ–ನಟಿಯರ ಅಭಿನಯದ ಸಿನಿಮಾಗಳು ನೋಡಲು ಹಿತವೆನಿಸುತ್ತದೆ. ಅದರಲ್ಲಿ ಒಳ್ಳೆಯ ಕಥೆ ಹಾಗೂ ಸುಮಧುರ ಹಾಡು, ಅವರ ಅಭಿನಯ ನಿಜಕ್ಕೂ ಮನಸೂರೆಗೊಳ್ಳುತ್ತೆ. ಇತ್ತೀಚೆಗೆ ಪ್ರಸಾರವಾದ 'ದೇವರ ಗುಡಿ', 'ಬಡವರ ಬಂಧು' ಚಿತ್ರಗಳು ತುಂಬಾ ಇಷ್ಟವಾದವು.

—ಬಿ. ಗಂಗಾಧರ್, ಬೆಂಗಳೂರು

### ಕಚೇರಿಗೆ ಚಕ್ಕರ್, ಪೂಜೆಗೆ ಹಾಜರ್!

ಕಲರ್ಸ್ ಕನ್ನಡದ 'ರಾಮಾಚಾರಿ' ಧಾರಾವಾಹಿಯಲ್ಲಿ ಉದ್ಯಮಿ ಜಯಶಂಕರ್ ಅವರ ಮನೆಯಲ್ಲಿ ನಡೆಯುವ ಸತ್ಯನಾರಾಯಣ ಪೂಜೆಗೆ ಮನೆಯೊಡತಿ ಮಾನ್ಯತಾಳೇ ಅಡ್ಡಗಾಲು ಹಾಕಿದಳು. ಅದಕ್ಕೆಲ್ಲ ಸಡ್ಡು ಹೊಡೆದು ರಾಮಾಚಾರಿ ಪತ್ನಿ ಚಾರುಲತಾ ಪೂಜೆಗೆ ಚ್ಯುತಿ ಬಾರದಂತೆ ನೆರವೇರಿಸಿದ್ದು; ಬಂದ ಅತಿಥಿಗಳ ಶಹಬ್ಬಾಸ್‌ಗಿರಿಗೆ ಪಾತ್ರವಾಯಿತು. ಈಗಾಗಲೇ ಕಚೇರಿಗೆ ರಾಮಾಚಾರಿ, ಚಾರುಲತಾ ಹೋಗದೆ ಬಹಳ ದಿನಗಳಾದವು. ಮುಂದೆ ಇಬ್ಬರೂ ಸೇರಿ ಪೌರೋಹಿತ್ಯ ಕಾರ್ಯಗಳನ್ನು ನೆರವೇರಿಸಲಿ! ಒಂದೇ ದಿನ ಬರುವ ಎರಡು ಪೌರೋಹಿತ್ಯ ಕಾರ್ಯಕ್ರಮವನ್ನು ಬೇರೆ ಬೇರೆ ಕಡೆ ಇಬ್ಬರೂ ನಡೆಸಿ ಕೊಡಬಹುದು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

### ಲಕ್ಷ್ಮೀ ನಿವಾಸ ಅಪಹಾಸ್ಯದ ನೆಲೆಯಲ್ಲ

ದೊಡ್ಡ ಮನೆತನ, ದೊಡ್ಡ ಬಿಸಿನೆಸ್, ಮೈ ತುಂಬಾ ಒಡವೆ ಧರಿಸಿರುವ ಮಹಿಳೆಯರ ಜೊತೆ ವಿಲನ್‌ಗಳ ದರ್ಪ. ಇಂತಹ ಸುಮಾರು ಧಾರಾವಾಹಿಗಳನ್ನೇ ನೋಡುತ್ತಿದ್ದ ನಮಗೆ ಕಲರ್ಸ್ ಕನ್ನಡದ 'ಲಕ್ಷ್ಮೀ ನಿವಾಸ' ವಿಭಿನ್ನ ಎಂದೆನಿಸಿದೆ. ಮಧ್ಯಮ ವರ್ಗಗಳ ನಿತ್ಯದ ಜೀವನ ಕ್ರಮವನ್ನು ಪ್ರತಿನಿಧಿಸುವ ಈ ಧಾರಾವಾಹಿಯಲ್ಲಿ ಕುಟುಂಬದ ಆಗುಹೋಗುಗಳು, ಕಷ್ಟ, ಸುಖ ಒಬ್ಬರಿಗೊಬ್ಬರ ಅವಲಂಬನೆ ಸುಂದರವಾಗಿ ಮೂಡಿಬರುತ್ತಿದೆ.

—ವೀಣಾ ಶಂಕರ್, ಬೆಂಗಳೂರು

ವಾರದ ಪತ್ರ

### ನಗೆಯ ಬುಗ್ಗೆ ಅರಳಿಸಿದ ಮಜಾಭಾರತ

'ದೇಶ ಸುತ್ತಿ ನೋಡು, ಕೋಶ ಓದಿ ನೋಡು' ಎಂಬ ಗಾದೆ ಮಾತಿಗೆ ಮಜಾ ಸಿಗಬೇಕು ಎಂದರೆ ಕಲರ್ಸ್ ಸೂಪರ್‌ನ 'ಮಜಾ ಭಾರತ' ನೋಡಬೇಕು. ಅದರಲ್ಲಿ 'ಪಾಪಾ ಪಾಂಡು' ಧಾರಾವಾಹಿಯ ನಟರು ಅತಿಥಿಗಳಾಗಿ ಭಾಗವಹಿಸಿದ್ದರು. ಅಂದು ವಿದ್ಯುತ್ ಇಲಾಖೆಯ ಲೈನ್‌ಮೆನ್ ವೃತ್ತಿಯವರನ್ನು ಆಧರಿಸಿ ಕಾರ್ಯಕ್ರಮ ರೂಪಿಸಿದ್ದರು. ಇದನ್ನು ನೋಡಿ ತುಂಬಾ ಖುಷಿಯಾಯಿತು.

ವಿದ್ಯುತ್ ಇಲ್ಲದೆ ನಮ್ಮ ಉಸಿರೇ ನಿಂತುಬಿಡುತ್ತದೆಯೋ ಎನ್ನುವ ಮಟ್ಟಿಗೆ ಅವಲಂಬಿತರಾಗಿದ್ದೇವೆ. ಹೀಗಿರುವಾಗ ಲೈನ್‌ಮೆನ್ ಕೆಲಸ ಥ್ಯಾಂಕ್‌ಲೆಸ್ ಜಾಬ್ ಎಂದೇ ಹೇಳಬೇಕು. ಅವರ ಕಾರ್ಯವೈಖರಿಗೆ ಅಭಿನಂದಿಸಿದಂತೆ ಈ ಕಾರ್ಯಕ್ರಮವಿತ್ತು. ಈ ಹಿಂದೆ ಹಲವು ಬಾರಿ ಪ್ರಸಾರವಾದ ಕಾಮಿಡಿ ಸ್ಕಿಟ್‌ನಲ್ಲಿ ಹಾಸ್ಯ ಇಲ್ಲದಿದ್ದರೂ ತೀರ್ಪುಗಾರರಾದ ಗುರುಕಿರಣ್ ಹಾಗೂ ರಚಿತಾರಾಮ್ ಹೇಗೆ ನಗುತ್ತಿದ್ದರೋ ಏನೋ?

—ರಘುನಾಥ ರಾವ್ ತಾಪ್ಸೆ, ದಾವಣಗೆರೆ

### ಸಾವಿರದ ಸರದಾರ 'ಸೂಪರ್ ಸ್ಟಾರ್'

ಸ್ಟಾರ್ ಸುವರ್ಣದ 'ಸುವರ್ಣ ಸೂಪರ್ ಸ್ಟಾರ್' ಮೊನ್ನೆ ಸಾವಿರ ಕಂತುಗಳನ್ನು ಪೂರೈಸಿದ್ದು ಅದಕ್ಕಾಗಿ ಹಮ್ಮಿಕೊಂಡಿದ್ದ ವಿಶೇಷ ಕಾರ್ಯಕ್ರಮ ಅಚ್ಚುಕಟ್ಟಾಗಿ ಮೂಡಿಬಂತು. ಇದರಲ್ಲಿ ಸೆಲೆಬ್ರಿಟಿಗಳಾದ ಶ್ವೇತಾ ಶ್ರೀವಾತ್ಸವ್, ಗಾನವಿ ಲಕ್ಷ್ಮಣ್, ಮಾನ್ವಿತಾ ಹರೀಶ್ ಭಾಗವಹಿಸಿದ್ದರು. ಅತಿಥಿಗಳು ನಿರೂಪಕಿ ಶಾಲಿನಿ ಅವರನ್ನು ಸನ್ಮಾನಿಸಿದರು. ಮಹಿಳೆಯರಿಗಾಗಿ ಮೀಸಲಾದ ಈ ಶೋ ಅವರ ಪ್ರತಿಭೆ ಹೊರ ತರುವಲ್ಲಿ ಯಶಸ್ವಿ ಆಗುತ್ತಿದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ



### ಬೊಂಬಾಟ್ ದಂಪತಿ

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ'ದಲ್ಲಿ ಸಿಹಿಕಹಿ ಚಂದ್ರು ಅವರ ಸಂಗಾತಿ ಗೀತಾ ಭಾಗಿಯಾಗಿದ್ದರು. ಚಂದ್ರು ತಮ್ಮ ಸಹಧರ್ಮಿಣಿಯ ಕೋರಿಕೆಯಂತೆ ಅವರೆಕಾಳು ಹಸಿರು ಸಾರು, ಮುದ್ದೆ ಮಾಡಿ ಉಣ ಬಡಿಸಿದರು. ಜೊತೆಗೆ ತಮ್ಮ ಜೀವನದ ಸಿಹಿ ಕಹಿ ಘಟನೆಗಳನ್ನು ಪರಸ್ಪರ ಮೆಲುಕು ಹಾಕುತ್ತಾ ದಂಪತಿ ಭೋಜನವನ್ನು ಸವಿದದ್ದು ಬೊಂಬಾಟ್ ಎನಿಸಿತು.

—ಸೌಭಾಗ್ಯ ಜಗದೀಶ್, ಬೆಂಗಳೂರು

### ಉತ್ತಮ ಸಂದೇಶದ ಡ್ರಾಮಾ

ಝೀ ಕನ್ನಡದ 'ಡ್ರಾಮಾ ಜೂನಿಯರ್ಸ್' ಕಾರ್ಯಕ್ರಮದಲ್ಲಿ ಹೆಣ್ಣು ಭ್ರೂಣಹತ್ಯೆಯ ಬಗ್ಗೆ ಬಾಲ ಕಲಾವಿದರು ಮನೋಜ್ಞವಾಗಿ ಅಭಿನಯಿಸಿದರು.

ಭ್ರೂಣಹತ್ಯೆಯ ವಿರುದ್ಧ ಸಿಡಿದೇಳುವ ಸಂದೇಶವನ್ನು ಮಕ್ಕಳು ರವಾನಿಸಿದರು. ಇಂತಹ ಸಮಾಜಮುಖಿ ಪ್ರದರ್ಶನಗಳು ನಿಜಕ್ಕೂ ಸ್ತುತ್ಯರ್ಹ. ಇನ್ನಾದರೂ ಹಣಬಾಕ ವೈದ್ಯರು ಹಾಗೂ ಅನಾಗರಿಕ ಕೃತ್ಯ ಎಸಗುವ ಪೋಷಕರು ಎಚ್ಚೆತ್ತುಕೊಳ್ಳಬೇಕಿದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

ಡ್ರಾಮಾ ಜೂನಿಯರ್ಸ್‌ನಲ್ಲಿ ಭದ್ರಾವತಿಯ ಇಂಚರ, ಶಿವಮೊಗ್ಗದ ಮಹಾಲಕ್ಷ್ಮಿ, ಹುಬ್ಬಳ್ಳಿಯ ಸಾಕ್ಷಿ, ಯಾದಗಿರಿಯ ಸಾಗರ್ ಮೊದಲಾದ ಚೂಟಿ ಚಿಣ್ಣರ ಪ್ರತಿಭೆ ಅದ್ಭುತವಾಗಿ ಅನಾವರಣಗೊಂಡಿದೆ. 5 ವರ್ಷದ ಕಂದನಿಂದ ಭಗವದ್ಗೀತೆ ವಾಚನ, ಸಿಂಧೂರ ಲಕ್ಷ್ಮಣ, ವೈನತೇಯ, ಅಲ್ಲಮ ಪ್ರಭು, ಭ್ರೂಣಹತ್ಯೆ ಮೊದಲಾದ ಪ್ರಸಂಗಗಳು ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡಿವೆ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

'ಡ್ರಾಮಾ ಜೂನಿಯರ್ಸ್'ನಲ್ಲಿ ಪ್ರಸ್ತುತಪಡಿಸಿದ ಅಲ್ಲಮಪ್ರಭುವಿನ ಆಟ ತುಂಬಾ ಸುಂದರವಾಗಿತ್ತು. 12 ವರ್ಷದ ರಿಷಿಕಾ ಅಲ್ಲಮಪ್ರಭುವಾಗಿ ವಚನಗಳನ್ನು ಹಾಡುತ್ತಾ ಅಭಿನಯಿಸಿದ್ದು ವಿಶೇಷವಾಗಿತ್ತು.

ಹಾಗೆಯೇ 'ಹೆಂಡತಿಯ ಶಾಪಿಂಗ್' ಹಾಸ್ಯ ನಾಟಕ ನಗೆಗಡಲಿನಲ್ಲಿ ನೂಕಿತು. 'ದಾಸ್ಯ ವಿಮೋಚನಾ' ಪ್ರಹಸನದಲ್ಲಿ ಸ್ವರ್ಗಕ್ಕೆ ಹೋಗಿ ದೇವೇಂದ್ರನಿಂದ ಅಮೃತ ಕಳಸ ತರುವುದು, 'ಹೆಣ್ಣು ಭ್ರೂಣ ಹತ್ಯೆ ಬಗ್ಗೆ ಜಾಗೃತಿ ಮೂಡಿಸುವ ನಾಟಕ ಕಣ್ಣಲ್ಲಿ ನೀರು ತರಿಸಿತು. ಮಕ್ಕಳ ಅಭಿನಯ, ವಸ್ತ್ರವಿನ್ಯಾಸ, ರಂಗಸಜ್ಜಿಕೆ, ಪರಿಣಾಮ ಬೀರುವ ಸಂಭಾಷಣೆ ಚೆನ್ನಾಗಿದೆ.

—ಭಾರತೀ ಗಂಗಾಧರ್, ಬೆಂಗಳೂರು